**ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು**
**ಸಿವಿಲ್ ಮಿಸಲೇನಿಯಸ್ ಸಂಖ್ಯೆ 01/2023**

ಪಿ.ಡಬ್ಲ್ಯೂ: 01

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 14.10.2025

**ಮುಂದುವರೆದ ಮುಖ್ಯವಿಚಾರಣೆ ಅರ್ಜಿದಾರರ ಪರ ವಕೀಲರಿಂದ ನ್ಯಾಯಾಲಯದ ಅನುಮತಿ ಮೇರೆಗೆಃ-**

01. ನಾನು ಮಧ್ಯಂತರ ಅರ್ಜಿ ಒಂದರ ಮೇಲಿನ ಸಾಕ್ಷ್ಯದಲ್ಲಿ ನಿಪಿ.1 ರಿಂದ 5 ರ ದಾಖಲೆಗಳನ್ನು ಹಾಜರು ಪಡಿಸಿದ್ದು, ಸದರಿ ದಾಖಲೆಗಳನ್ನು ನನ್ನ ಮುಖ್ಯ ಸಾಕ್ಷ್ಯದ ದಾಖಲೆಗಳು ಎಂದು ಪರಿಗಣಿಸಲು ವಿನಂತಿಸುತ್ತೇನೆ.

**ಎದುರುದಾರರ ಪರ ವಕೀಲರಿಂದ ಪಾಟೀ ಸವಾಲುಃ-**

02. ವೆರಿಫಿಕೇಶನ್ ಮಾಡುವ ಕಾರಣದಿಂದ ಈ ಅರ್ಜಿ ಸಲ್ಲಿಸಲು ವಿಳಂಬವಾಗಿದೆ. ಎಂ.ವಿ.ಸಿ ಪ್ರಕರಣಗಳಲ್ಲಿ ಒಂದು ಲಕ್ಷ ರೂಪಾಯಿಗಿಂತಲು ಹೆಚ್ಚು ಕ್ಲೇಮ್ ಇದ್ದಾಗ ಮೆಡಿಕಲ್ ಬಿಲ್ಲುಗಳ ವೆರಿಫಿಕೇಶನ್ ಆದ ನಂತರ ಸಾಕ್ಷ್ಯ ಕೊಡುತ್ತೇವೆ ಎನ್ನುವುದು ನಿಜ. ಎಂ.ವಿ.ಸಿ ನಂ.533/2019 ರಲ್ಲಿ ಮೆಡಿಕಲ್ ಬಿಲ್ಲುಗಳ ವೆರಿಫಿಕೇಶನ್ ಆದ ನಂತರ ಸಾಕ್ಷ್ಯ ಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ. ಆಗ ನಮಗೆ ದಾಖಲೆಗಳು ಸಿಗದೆ ಇದುದ್ದರಿಂದ ಮೆಡಿಕಲ್ ಬಿಲ್ಲುಗಳ ವೆರಿಫಿಕೇಶನ್ ಮಾಡಿಲ್ಲ. ಮೆಡಿಕಲ್ ಬಿಲ್ಲುಗಳು ಅರ್ಜಿದಾರರ ಪರ ಸಾಕ್ಷ್ಯದಲ್ಲಿ

ನಿಶಾನೆಗಳಾಗಿ ಗುರುತಿಸಿದ ನಂತರ ನಾವು ವೆರಿಫಿಕೇಶನ್ ಮಾಡಿದ ನಂತರ ನಾವು ಸಾಕ್ಷ್ಯ ಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ.

03. ಗಾಯಾಳುವಿಗೆ ಮೊಣಕಾಲಿನ ಮೇಲೆ ಮತ್ತು ಕಾಲಿನ ಮೇಲೆ ಎಂಪುಟೇಶನ್ ಗಾಯಗಳು ಆಗಿದ್ದವು ಎಂದರೆ ಎಂಪುಟೇಶನ್ ಗಾಯಗಳು ಆಗಿದ್ದು ನನಗೆ ಗೊತ್ತು, ಆದರೆ ಎಲ್ಲಿ ಎಂಪುಟೇಶನ್ ಗಾಯಗಳು ಆಗಿದ್ದವು ಎಂದು ಗೊತ್ತಿಲ್ಲ.

04. ವಿವಾದಿತ ಬಿಲ್ಲುಗಳ ಮೊತ್ತ ಅಂದಾಜು 13 ಲಕ್ಷ ಇರುತ್ತದೆ. ವಿವಾದಿತವಲ್ಲದ ಬಿಲ್ಲುಗಳ ಮೊತ್ತ ಅಂದಾಜು 6 ಲಕ್ಷ ಇರುತ್ತದೆ. ಮುಖ್ಯವಿಚಾರಣೆಯಲ್ಲಿ ಒಟ್ಟು ಕ್ಲೇಮ್ ಮಾಡಿದ ಮೊತ್ತ ರೂ.20,38,000/- ನಾನು ತಪ್ಪಾಗಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ವಿವಾದಿತ ಮೊತ್ತಗಳಲ್ಲಿ ರೂ.4,83,000/- ಹಣ ವಿವಾದಿತ ಮೊತ್ತ ಅಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಅದನ್ನು ಡಬ್ಬಲ್ ಕ್ಲೇಮ್ ಮಾಡಲಾಗಿದೆ. ಸದರಿ ಮೊತ್ತ ರೂ.4,83,000/- ಹಣವನ್ನು ಮೆಡಿಕಲ್ ಬಿಲ್ಲುಗಳಲ್ಲಿ ಡಬ್ಬಲ್ ಕ್ಲೇಮ್ ಮಾಡಿಲ್ಲ ಎನ್ನುವುದು ಸುಳ್ಳು.

05. ಯಾವುದೇ ಬಿಲ್ಲುಗಳಲ್ಲಿ ಡಬ್ಬಲ್ ಕ್ಲೇಮ್ ಆಗಿಲ್ಲ ಎನ್ನುವುದು ಸುಳ್ಳು. ಕ್ಲೇಮ್ ಹಣ ಕೊಡುವುದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

06. ಎಂ.ಎಫ್.ಎ ನಂ.200382/2023 (ಎಮ್.ವಿ-1) ರಲ್ಲಿ ದಿನಾಂಕ 15.07.2025 ರಂದು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ

ಮಾಡಿದ ಆದೇಶದ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ಪ್ರಕರಣದಲ್ಲಿ ನಮ್ಮ ಇನ್ಸರೇನಶ್ ಕಂಪನಿಯಿಂದ ವಕೀಲರು ಹಾಜರಾಗಿದ್ದರು. ನಮ್ಮ ವಕೀಲರು ಸದರಿ ಎಂ.ಎಫ್.ಎ ಪ್ರಕರಣದಲ್ಲಿ ಮೆಡಿಕಲ್ ಬಿಲ್ಲುಗಳ ಬಗ್ಗೆ ವಾದ ಮಾಡಿದ್ದಾರೆ ಮತ್ತು ಅದರಲ್ಲಿ ಅರ್ಜಿಯನ್ನು ಮಂಜೂರು ಮಾಡಲಾಗಿದೆ ಎಂದರೆ ನಮ್ಮ ವಕೀಲರು ವಾದ ಮಾಡಿರುವುದು ನನಗೆ ಗೊತ್ತಿಲ್ಲ.

07. ಈ ನ್ಯಾಯಾಲಯದಲ್ಲಿ ಪುನರೀಕ್ಷಣ ಅರ್ಜಿ ಸಲ್ಲಿಸಲು ಅವಕಾಶ ಇಲ್ಲ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.